ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತ್ತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಿಗೆ ಅನುಕೂಲ ವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಗೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಭಾವಿ ಹಾಕಲ್ಪಟ್ಟ ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ವೃತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ಬಂಡಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟ್ಟ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ಯಾ—ಜಿಲ್ಲ್ಯಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟ್ಟ ವಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ಮತ್ತು ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಬೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಕ್ಷೇರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸ್ಥಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್‌ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಬಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಗೆ ಲೈಸೆನ್ಸ್.

9. ಫಾರೆಸ್ಟ್ ಇಲಾಖ್ಯೆ ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸುಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಜಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸುಗಳೂ ಪುಸದೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯನ್ನು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯೂಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಒಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಕೀವೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬೂಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇಲಾಖ್ಯೆ ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯೂಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫಿಸರೇ ಆಗಲಿ ಇವರ ಮಂಜೂರಾತಿನಿಲಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇಲಾಖ್ಯೆ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವು ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಜ್ಞಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕಲೆಕ್ಟರವೇಟರ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಗೋರೀಬಿದನೂರು ತಾಲ್ಲೂಕು ಮಂಜೇನಹಳ್ಳಿಲಿರುವ ಯಡಗೈ ಜಾಲೋನನ ವಿಷಯದಲ್ಲಿ—

ಸ್ಯ 1895—96ನೇ ಇಸವಿ ದಿವಾಳಿ ಕೇಸ್ ನಂಬರು 378.

ಹುಕ್ಕುಂ,

ಮೇಲ್ಕಂಡ ಜಾಲೋನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೆದಾರರಾದ ಜಾಲೋನನ ಪರವಾಗಿ ಅಡ್ವೊಕೇಟ್ ಮೆಸ್ಸರ್. ಕೃಷ್ಣ ಮೂರ್ತಿರಾಯರಿಗಾಗಿ ಮೆಸ್ಸರ್ ಗಂಗಾಧರಯ್ಯನವರನ್ನೂ ಮತ್ತು ಸದರೀಯವರ ಲೇಣದೇದಾರರಾದ ಮಳಿಗೆ ಮಲ್ಲಯ್ಯನ ತರಫ್ ಅಡ್ವೊಕೇಟ್ ಮೆಸ್ಸರ್ ಎಸ್. ರಾಮಸ್ವಾಮಯ್ಯಂಗಾರ್ರ್ ಯದುರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಜಾಲೋನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ರುಜುವಾತಾದ ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಪೊಬಲಗು.	ಯಾವಾಗ ದೇಣೇ ಕಟ್ಟಿಂಪಡದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಗೋರಿಬಿದನೂರು ತಾಲ್ಲೂಕು ಮಂಜೇನ ಹಳ್ಳಿಲಿರುವ ಮಳಿಗೆ ಮಲ್ಲಯ್ಯ ..	135-15-0	..	ಚಿಕ್ಕಬಳ್ಳಾಪುರದ ಮುನಸಿಫ್ ಕೋರ್ಟು 1895—96ನೇ ಇಸವಿ ಜಾರಿ 761ನೇ ನಂಬರ್ ವಾರಂಟ್ ಪೊಬಲಗು.	

ದಿವಾಳಿಯಾದ ಡಿಕ್ರಿ ದೇಣೇದಾರ ಗೋರಿಬಿದನೂರು ತಾಲ್ಲೂಕು ಮಂಜೇನಹಳ್ಳಿಲಿರುವ ನರಸಿಂಹನ ವಿಷಯದಲ್ಲಿ—

ಸ್ವ 1895—96ನೇ ಇಸವಿ ದಿವಾಳಿ ಕೇಸ್ ನಂಬರು 379.

ಹುಕುಂ,

ಮೇಲ್ಕಂಡ ನರಸಿಂಹನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರರಾದ ನರಸಿಂಹನ ಪರವಾಗಿ ಅಡ್ವೊಕೇಟ್ ಮೆಸ್ಟರ್ ಕೃಷ್ಣಮೂರ್ತಿರಾಯರನ್ನೂ ಮತ್ತು ಸದರೀಯವರ ಲೇಣೇದಾರರಾದ ಮಳಿಗೆ ಮಲ್ಲಯ್ಯನ ತರಫ್ ಅಡ್ವೊಕೇಟ್ ಮೆಸ್ಟರ್ ಎಸ್. ರಾಮಸ್ವಾಮಯ್ಯಂಗಾರ್ರ ಯಿದುರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ನರಸಿಂಹನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ರುಜುವಾತಾದ ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಪೊಬಲಗು.	ಯಾವಾಗ ದೇಣೇ ಕಟ್ಟಿಂಪಡದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಗೋರೀಬಿದನೂರು ತಾಲ್ಲೂಕು ಮಂಜೇನಹಳ್ಳಿಯಲ್ಲಿರುವ ಮಳಿಗೆ ಮಲ್ಲಯ್ಯ ..	135-15-0	..	ಚಿಕ್ಕಬಳ್ಳಾಪುರದ ಮುನಸಿಫ್ ಕೋರ್ಟು 1895—96ನೇ ಇಸವಿ ಜಾರಿ 761ನೇ ನಂ. ವಾರಂಟ್ ಪೊಬಲಗು.	

ಸ್ವ 1896ನೇ ಇಸವಿ ಜುಲೈ 4ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರೀ ದೇಣೇದಾರ ಕೋಲಾರ ತಾಲ್ಲೂಕು ಕಾಯಂಗುತ್ತಾ ಪಾರೆಹೊಸಹಳ್ಳಿಯಲ್ಲಿರುವ ಪಾಪನಹಳ್ಳಿಯ ರುದ್ರಪ್ಪನ ವಿಷಯದಲ್ಲಿ—

ಸ್ವ 1895—96ನೇ ಇಸವಿ ದಿವಾಳಿ ಕೇಸ್ ನಂಬರು 271.

ಹುಕುಂ,

ಮೇಲ್ಕಂಡ ರುದ್ರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರರಾದ ರುದ್ರಪ್ಪನನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಖಾಸ್ತ್ಕೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ,—1ನೇ ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷ್ಷ ಕಮಿಷ್ಸಿಯಲ್ ಸ್ಟ್ರೀಟಿನಲ್ಲಿರುವ ಜವಳಿ ಅಂಗಡಿ ಹಾಜಿ ಜ್ಹಾ ಮಹಮ್ಮದ್‌ಶೇಟ್, ಹಾಜಿ ಅಬ್ದುಲ್ಲಾಶೇಟ್, 2ನೇ ಡಿಟೋ ಹಾಜಿ ಹೈದರ್‌ಖಾನ್‌ಸಾಬಿ ಕಂಪೆನಿ, 3ನೇ ಕೋಲಾರ ಕಛಾರಿಪೇಳ್ಯದಲ್ಲಿರುವ ಸರ್ಜಾಪುರದ ದೊಡ್ಡತಿಮ್ಮಯ್ಯ, 4ನೇ ಕೋಲಾರ ಡಿಸ್ಟ್ರಿಕ್ಟ್ ಮುಳುಬಾಗಲ್‌ನಲ್ಲಿ ಇರುವ ವೈದ್ಯಂ ಕ್ರಿಷ್ಣಪ್ಪ, 5ನೇ ಡಿಟೋ ಅಡಿಕೆ ಮಳಿಗೆ ಮೇಡೂರು ನಂಜುಂಡಪ್ಪ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ರುದ್ರಪ್ಪನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿವೇಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸೂಲಕ್ಕೊಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ಸಿಖಾಲಸ್ ಮಾಡಲಾಗಿರುತ್ತೆ ಯಂದು ಯಿದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ರುಜುವಾತಾದ ಸೂಲದಪಟ್ಟಿ,

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸೂಲಿಗೆ.	ಯಾವಾಗ ದೇಣೇ ಕೊಟ್ಟದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ನಿಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷ್ಷ ಕಮಿಷ್ಸಿಯಲ್ ಸ್ಟ್ರೀಟಿನಲ್ಲಿರುವ ಜವಳಿ ಅಂಗಡಿ ಹಾಜಿ ಜ್ಹಾ ಮಹಮ್ಮದ್‌ಶೇಟ್, ಹಾಜಿ ಅಬ್ದುಲ್ಲಾಶೇಟ್ ..	198—5—6	..	ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷ್ಷ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್ 1894–95ನೇ ಇಸವಿ ಸ್ಮಾಲ್‌ಕಾಜ್ 148ನೇ ನಂಬರ್ ಡಿಕ್ರಿ ಮೊಬಲಗು. ಪ್ರಾಮಿಸರಿ ನೋಟ್ ಬಾಬತು.	
2	ಹಾಜಿ ಹೈದರ್‌ಖಾನ್‌ಸಾಬಿ ಕಂಪೆನಿ ..	140—0—0	..		
3	ಕೋಲಾರದ ಕಛಾರಿಪೇಳ್ಯದಲ್ಲಿರುವ ಸರ್ಜಾಪುರದ ದೊಡ್ಡತಿಮ್ಮಯ್ಯ ..	86—0—0	..	ಕೋಲಾರದ ಮುನ್ಸಿಫ್ ಕೋರ್ಟ್ 1893-94ನೇ ಇಸವಿ ಅಸಲ್ 455ನೆ ನಂಬರ್ ಡಿಕ್ರಿ ಮೊಬಲಗು. ಪತ್ರದ ಬಾಬತು.	
4	ವೈದ್ಯಂ ಕ್ರಿಷ್ಣಪ್ಪ ..	125—0—0	..		
5	ನಂಜುಂಡಪ್ಪ ..	20—0—0	..	ಲೆಖ್ಕದ ಬಾಬತು.	

ಸ್ ಸ 1896ನೇ ಇಸವಿ ಜ್ಹಾ 17ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರು ನಮ್ಮ ದಸ್ತಖತ್‌ನಿಸ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿಯಲ್ಲಿರುವ ನಿಜಗಲ್ ಹುಚ್ಚವೀರಪ್ಪನ ಮಗ ಶಿದ್ದಪ್ಪನ ವಿಷಯದಲ್ಲಿ—

ಸ್ ಸ 1894—95ನೇ ಇಸವಿ ದಿವಾಳಿ ವ್ಯಾಜ್ಯದ ನಂಬರ್ 257.

ಹುಕ್ಕುಂ,

ಮೇಲ್ಕಂಡ ಶಿದ್ದಪ್ಪನು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜಿದಾರನ ಪರವಾಗಿ ಅಡ್ವೊಕೇಟ್ ಮೆಸ್ಸರ್ಸ್ ಕೆ. ಟಿ. ನರಸಿಂಹ್ಯಯ್ಯಂಗಾರ್‌ರವರ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜಿದಾರನ ಲೇಣೇದಾರರಾದ 1ನೇ ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕು ಬುಕ್ಕಾಪಟ್ಟಣದಲ್ಲಿ ವಾಸವಾಗಿರುವ ಮದೋಡ ಬಸಪ್ಪನವರ ಮಗ ಮದೋಡ ಪ್ಪನ ತರಫ್ ಫರ್ಸ್ಟ್‌ಗ್ರೇಡ್ ಪ್ಲೀಡರ್ ಮೆಸ್ಸರ್ ಕ್ರಿಷ್ಣಪ್ಪನವರ ಯದುರಾಗಿಯೂ ದರ್ಖಾಸ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಖಾಸ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—1ನೇ ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿಯಲ್ಲಿರುವ ಬೇಬಿ ನಂಜಪ್ಪ, 3ನೇ ತುಮಕೂರು ಡಿಸ್ಟ್ರಿಕ್ಟ್ ಗುಬ್ಬೀ ತಾಲ್ಲೂಕು ನಿಟ್ಟೂರು ಸಮ್ಮತ್ತು ವತ್ತಿಗಟ್ಟದಲ್ಲಿರುವ ದೊಡ್ಡ ಬಸಪ್ಪನ ಮಗ ಪತ್ತೆಪ್ಪ.

ಸದರೀ ತಿದ್ದಪ್ಪನು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದುನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. 1ನೇ ಕೈಡಿಟರು ಮದೋಡಪ್ಪನು ಐರ್ಜ ದಿವಾಳಿಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ ಮಾಡಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ವಡನೆ ತನ್ನ ರಿಸೀವರ ಕೆಲಸಗಳಿಗೆ ವುದ್ಯುಕ್ತ ಪಡತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟು ಇಧೆ.

ಸ್ಞ 1896ನೇ ಇಸವಿ ಫಿಬ್ರವರಿ 22ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಈ ಕೆಳಗಿನ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರಿಗೆ ಯದುರಾಗಿ ದಾಖಲಾಗಿ ಇರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿಧಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟು ಇಧೆ.

ನಂಬರು.	ಲೇಣೇದಾರ್ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ಮೊಬಲಗು.	ಸಾಲಗಳ ಸ್ವಭಾವ ಪ್ರತಿಫಲ ಮತ್ತು ಏನಾದರೂ ಈಡು.
1	ತುಮಕೂರು ಡಿಸ್ಟ್ರಿಕ್ಟ್ ತಿರಾ ತಾಲ್ಲೂಕು ಬುಕ್ಕಪಟ್ಟಣದಲ್ಲಿರುವ ಮದೋಡ ಬಸಪ್ಪನವರ ಮಗ ಮದೋಡಪ್ಪ. ..	427—0—0	ತುಮಕೂರು ಮುನಸಿಫ್ ಕೋರ್ಟ್ 1890ನೇ ಇಸವಿ ಅಸಲ್ 14ನೇ ನಂಬರ್ ಡಿಕ್ರಿ ಮೊಬಲಗ್.

ಸ್ಞ 1896ನೇ ಇಸವಿ ಜುಲೈ 1ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಗರುಡಾಚಾರಿಯು ವಿಷಯದಲ್ಲಿ—

ಸ್ಞ 1895—96ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 382.

ಹುಕ್ಕುಂ,

ಮೇಲ್ಕಂಡ ಗರುಡಾಚಾರಿಯು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜಿದಾರನ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜಿದಾರನ ಲೇಣೇದಾರರಾದ 1ನೇ ಬೆಂಗಳೂರು ಚಿಕ್ಕಪೇಟೆ ವೆತ್ತರಾದಿ ಮಠದಗಲ್ಲಿಯಲ್ಲಿರುವ ಬುಕ್ಕ ಡಿಪೋ ಲೀಪ್ ಮ್ಯಾನೇಜರ್ ನಾರಣಯ್ಯಂಗಾರ್ರು, 2ನೇ ಡಿಟೋ ಚಿಕ್ಕಪೇಟೆಯಲ್ಲಿ ಭಕ್ಷಿ ಗಂಗಯ್ಯನವರ ಮನೆ ಹತ್ತಿರ ಇರುವ ಹೊನ್ನಪ್ಪನ ಮಗ ಗಂಗಪ್ಪನವರ ಯದುರಾಗಿಯೂ ದರ್ಯಾಫ್ತ್ ಮಾಡಲ್ಪಟ್ಟಿತು.

ಸದರೀ ಗರುಡಾಚಾರಿಯು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದುನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. 1ನೇ ಕೈಡಿಟರ್ ನಾರಣಯ್ಯಂಗಾರ್ರು ಐರ್ಜ ದಿವಾಳಿಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ ಮಾಡಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ವಡನೆ ತನ್ನ ರಿಸೀವರ ಕೆಲಸಗಳಿಗೆ ವುದ್ಯುಕ್ತ ಪಡತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟು ಇಧೆ.

ಈ ಕೆಳಗಿನ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರಿಗೆ ಯದುರಾಗಿ ದಾಖಲಾಗಿ ಇರುವ ಮೊಬಲಗುಗಳಿಗೆ ಲೇಣೇದಾರರೆಂದು ರುಜುವು ಮಾಡಿಧಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟು ಇಧೆ.

ನಂಬರು.	ಲೇಣೇದಾರ್ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ಮೊಬಲಗು.	ಸಾಲಗಳ ಸ್ವಭಾವ ಪ್ರತಿಫಲ ಮತ್ತು ಏನಾದರೂ ಈಡು.
1	ಬೆಂಗಳೂರು ಚಿಕ್ಕಪೇಟೆ ವೆತ್ತರಾದಿ ಮಠದಗಲ್ಲಿಯಲ್ಲಿರುವ ಬುಕ್ಕ ಡಿಪೋ ಲೀಪ್ ಮ್ಯಾನೇಜರ್ ನಾರಣಯ್ಯಂಗಾರು). ..	116—15—9	ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್ 1895—96ನೇ ಇಸವಿ ಜಾರಿ 1682ನೇ ನಂ. ವಾರಂಟು ಮೊಬಲಗು.

ಸ್ಞ 1896ನೇ ಇಸವಿ ಜುಲೈ 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿದೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.